# ಭಾರತೀಯ ರೆಡ್‌ಕ್ರಾಸ್ ಸಂಸ್ಥೆ
## ದಕ್ಷಿಣ ಕನ್ನಡ ಜಿಲ್ಲಾ ಶಾಖೆಯ ಕಾರ್ಯಚಟುವಟಿಕೆಗಳ ವಾರ್ಷಿಕ ವರದಿ
## (2019-20)
## 01.04.2019 ರಿಂದ 31.03.2020

ಗೌರವಾನ್ವಿತ,

ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಯವರೇ, ಉಪಾಧ್ಯಕ್ಷರು ಹಾಗೂ ಅಪರ ಜಿಲ್ಲಾಧಿಕಾರಿಯವರೇ, ಪೋಷಕ ಸದಸ್ಯರುಗಳೇ, ಉಪ-ಪೋಷಕ ಸದಸ್ಯರೇ ಹಾಗೂ ಅಜೀವ ಸದಸ್ಯರುಗಳೇ,

ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ. ಜಿಲ್ಲೆಯ ಗೌರವ ಕಾರ್ಯದರ್ಶಿಯಾದ ನಾನು, ಆಡಳಿತ ಮಂಡಳಿಯ ಪರವಾಗಿ ನಮ್ಮ ಸಂಸ್ಥೆಯ 2019-20 ಸಾಲಿನ ಚಟುವಟಿಕೆ ವರದಿಯನ್ನು ನಿಮ್ಮ ಮುಂದೆ ಇರಿಸಲು ಸಂತಸ ಪಡುತ್ತೇನೆ.

ಭಾರತೀಯ ರೆಡ್‌ಕ್ರಾಸ್‌ನ ಶತಮಾನೋತ್ಸವದ ಹೊಸ್ತಿಲಿನಲ್ಲಿ ನಿಂತಿರುವ ನಮ್ಮ ದ.ಕ. ಶಾಖೆಯು 82 ವರ್ಷಗಳ ಇತಿಹಾಸವನ್ನು ಹೊಂದಿದೆ. ಇದು ಎಲ್ಲರ ಸಹಕಾರದೊಂದಿಗೆ ಸಾರ್ವಜನಿಕ ಸೇವೆಯನ್ನು ಮಾಡುತ್ತಿದೆ. ಪ್ರಸ್ತುತ ಆಡಳಿತ ಸಮಿತಿ 2019ರ ಫೆಬ್ರವರಿಯಿಂದ ಕಾರ್ಯನಿರ್ವಹಿಸುತ್ತಿದೆ.

ಶ್ರೀ ಎಸ್. ಶಶಿಕಾಂತ್ ಸೆಂಥಿಲ್ ಮತ್ತು ಶ್ರೀಮತಿ ಸಿಂಧು ಬಿ. ರೂಪೇಶ್ ವರದಿಯ ಅವಧಿಯಲ್ಲಿ ಅಧ್ಯಕ್ಷರಾಗಿದ್ದರು, ಶ್ರೀ ವೆಂಕಟಾಚಲಪತಿ ಆರ್. ಮತ್ತು ಶ್ರೀಮತಿ ಎಂ.ಜೆ. ರೂಪಾ ಇವರು ಶಾಖೆಯ ಉಪಾಧ್ಯಕ್ಷರಾಗಿದ್ದರು. ಶ್ರೀ ಸಿ.ಎ. ಶಾಂತರಾಮ ಶೆಟ್ಟಿ, ಚೇರ್‌ಮನ್, ಶ್ರೀ ಬಿ. ನಿತ್ಯಾನಂದ ಶೆಟ್ಟಿ, ವೈಸ್-ಚೇರ್‌ಮನ್ ಮತ್ತು ಶ್ರೀ ಆರ್ಚಿಬಾಲ್ಡ್ ಮೆನೇಜಸ್ ಗೌರವ ಖಜಾಂಚಿ ಹಾಗೂ ಶ್ರೀ ಎಸ್.ಎ. ಪ್ರಭಾಕರ ಶರ್ಮ ಗೌರವ ಕಾರ್ಯದರ್ಶಿಯಾಗಿದ್ದರು.

**<u>ಸದಸ್ಯತ್ವದ ವಿವರಗಳು:</u>**

| | ಈವರೆಗೆ **31.03.2019** | **01.04.2019** ರಿಂದ **31.03.2020** | ಒಟ್ಟು ಸದಸ್ಯರು |
|---|---|---|---|
| ಪೋಷಕ | 29 | 01 | 30 |
| ಉಪ ಪೋಷಕ | 01 | - | 01 |
| ಅಜೀವ ಸದಸ್ಯರು | 1982 | 43 | 2025 |

**<u>ರೆಡ್‌ಕ್ರಾಸ್ ರಕ್ತನಿಧಿ :</u>**

ರೆಡ್‌ಕ್ರಾಸ್‌ನ ರಕ್ತನಿಧಿಯು ಸರಕಾರಿ ಲೇಡಿಗೋಶನ್ ಆಸ್ಪತ್ರೆಯ ಆವರಣದಲ್ಲಿರುತ್ತದೆ. ಇದು 24x7 ಸೇವೆಯನ್ನು ಸಲ್ಲಿಸುತ್ತಿದೆ. ಲೇಡಿಗೋಶನ್ ಆಸ್ಪತ್ರೆಯ ರೋಗಿಗಳಿಗೆ ರಕ್ತವನ್ನು ಉಚಿತವಾಗಿ ನೀಡುತ್ತಿದೆ. ವರದಿಯ ಅವಧಿಯಲ್ಲಿ 2972 ರಕ್ತ ಘಟಕಗಳನ್ನು(units) ರೋಗಿಗಳಿಗೆ ನೀಡಲಾಗಿದೆ.

ಅ) ಔಷಧ ನಿಯಂತ್ರಕರ ಇಲಾಖೆಯ ನಿಯಮಗಳ ಪ್ರಕಾರ ದ.ಕ. ಜಿಲ್ಲೆಯಾದ್ಯಂತ ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ.

ಆ) ನ್ಯಾಕೋ ಮಾರ್ಗಸೂಚಿಗಳ ಪ್ರಕಾರ ಎಲೈಸಾ ಪರೀಕ್ಷೆ ಇತ್ಯಾದಿಗಳನ್ನು ನಡೆಸಿ cross matching ಮಾಡಿ ವೈದ್ಯರ ಸೂಚನೆಯ ಮೇರೆಗೆ ರಕ್ತವನ್ನು ನೀಡಲಾಗುತ್ತಿದೆ.

ಇ) ನಮ್ಮ ರೆಡ್‌ಕ್ರಾಸ್ ರಕ್ತನಿಧಿಯಲ್ಲಿ ವೈದ್ಯಕೀಯ ಅಧಿಕಾರಿಯಾಗಿ ಡಾ. ರಚನಾ ಕೊಪ್ಪಲ್ಕರ್ ಕಾರ್ಯನಿರ್ವಹಿಸಿದ್ದಾರೆ. ರೆಡ್‌ಕ್ರಾಸ್ ರಕ್ತನಿಧಿಯ ಉಪಸಮಿತಿ ಅಧ್ಯಕ್ಷರಾದ ಡಾ. ಯು.ವಿ. ಶೆಣೈ ಇವರ ಮಾರ್ಗದರ್ಶನದಲ್ಲಿ ಸಿಬ್ಬಂದಿ ಸಭೆಗಳನ್ನು ನಡೆಸುವ ಮೂಲಕ ಮೇಲ್ವಿಚಾರಣೆಯನ್ನು ಮಾಡಲಾಗುತ್ತದೆ.

ಈ) ರೆಡ್‌ಕ್ರಾಸ್ ರಕ್ತನಿಧಿ ಉಪಸಮಿತಿಯ ಕಾರ್ಯಕ್ಷಮತೆಯನ್ನು ಪರಿಶೀಲಿಸಲು ನಿಯಮಿತವಾಗಿ ಆಡಳಿತ ಮಂಡಳಿ ಸಭೆ ಸೇರುತ್ತದೆ.
ರೋಟರಿ ಕ್ಲಬ್, ಮಂಗಳೂರು ಇವರು ನೀಡಿದ ಮೊಬೈಲ್ ರಕ್ತದಾನದ ಬಸ್ ತನ್ನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ.

**<u>ರಕ್ತದಾನ ಶಿಬಿರಗಳು, ಸಂಗ್ರಹ ಮತ್ತು ವಿತರಣೆ :</u>**

| ವರ್ಷ | ರಕ್ತದಾನ ಶಿಬಿರಗಳು | ಒಟ್ಟು ಸಂಗ್ರಹ | ಒಟ್ಟು ವಿತರಣೆ |
|---|---|---|---|
| 2015-16 | 72 | 3148 | 5711 |
| 2016-17 | 91 | 6182 | 11353 |
| 2017-18 | 116 | 7215 | 14590 |
| 2018-19 | 106 | 7257 | 13141 |
| 2019-20 | 133 | 8567 | 18888 |

**ರೆಡ್‌ಕ್ರಾಸ್ – ಎನ್.ಎಂ.ಪಿ.ಟಿ.(New Mangalore Port Trust):**

ರೆಡ್‌ಕ್ರಾಸ್–ಎನ್.ಎಂ.ಪಿ.ಟಿ ಚಿಕಿತ್ಸಾಲಯವನ್ನು ಎನ್.ಎಂ.ಪಿ.ಟಿ ಸಹಯೋಗದೊಂದಿಗೆ ಪಣಂಬೂರಿನಲ್ಲಿ 07.09.2018ರಂದು ಪ್ರಾರಂಭಿಸಲಾಯಿತು. ಪಣಂಬೂರಿನ ದುರ್ಬಲ ಪ್ರದೇಶದಲ್ಲಿ ನೆಲೆಗೊಂಡಿರುವ ಈ ಕ್ಲಿನಿಕ್ ಸಾವಿರಾರು ಕಾರ್ಮಿಕರ ಕುಟುಂಬಗಳಿಗೆ ಮತ್ತು ಇತರ ಜನರಿಗೆ ಮಹತ್ತರ ಸೇವೆಯನ್ನು ನೀಡಿದೆ, ವೈದ್ಯಕೀಯ ಸಲಹೆ ಮತ್ತು ಔಷಧಿಗಳನ್ನು ಉಚಿತವಾಗಿ ನೀಡಲಾಗಿದೆ. ಕ್ಲಿನಿಕ್‌ನಲ್ಲಿ ಆರೋಗ್ಯ ತಪಾಸಣೆ ಮತ್ತು ವೈದ್ಯಕೀಯ ಶಿಬಿರಗಳನ್ನು ಸಹ ಆಯೋಜಿಸಲಾಗಿದೆ.

**ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರ (ಪಿಎಂಬಿಜೆಕೆ), ಪದವಿನಂಗಡಿ :**

ದಿನಾಂಕ 05.10.2019ರಿಂದ ನಗರದ ಪದವಿನಂಗಡಿ ಪರಿಸರದಲ್ಲಿ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರವನ್ನು ಸ್ಥಾಪಿಸಿ ಬಡ ಜನರಿಗೆ ಅತ್ಯಂತ ಕನಿಷ್ಠ ದರದಲ್ಲಿ ಅತ್ಯುತ್ತಮ ಔಷಧಗಳನ್ನು ವಿತರಿಸಲು ಮತ್ತು ಸರಕಾರದ ಮಹಾತ್ವಾಕಾಂಕ್ಷಿ ಯೋಜನೆಯೊಂದನ್ನು ಅನುಷ್ಠಾನಗೊಳಸಲು ಕ್ರಮಕೈಗೊಳ್ಳಲಾಗಿದೆ.

**ಕಾರ್ಯಚಟುವಟಿಕೆಗಳ ವಿವರಗಳು – 01.04.2019 ರಿಂದ 31.03.2020 :**

ಸರಕಾರಿ ಇಲಾಖೆಗಳು ಮತ್ತು ಕಾಲೇಜುಗಳೂ ಒಳಗೊಂಡಂತೆ ಇತರೆ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ನಮ್ಮ ಶಾಖೆಯು ಅನೇಕ ಜಾಗೃತಿ ಶಿಬಿರಗಳನ್ನು, ಪ್ರಥಮ ಚಿಕಿತ್ಸೆ ಹಾಗೂ ಪ್ರಕೃತಿ ವಿಕೋಪ ತರಬೇತಿ ಶಿಬಿರಗಳನ್ನು ಜಿಲ್ಲೆಯಾದ್ಯಂತ ನಡೆಸಿದೆ. ಪ್ರಮುಖ ದಿನಗಳಾದ ರಾಷ್ಟ್ರೀಯ ಯುವ ದಿನ, ವಿಶ್ವ ಆರೋಗ್ಯ ದಿನ, ವಿಶ್ವ ಪರಿಸರ ದಿನ, ವಿಶ್ವ ರೆಡ್‌ಕ್ರಾಸ್ ದಿನ, ವಿಶ್ವ ರಕ್ತದಾನಿಗಳ ದಿನ, ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನ ಇತ್ಯಾದಿಗಳನ್ನು ಆಚರಿಸಿ ಸಾರ್ವಜನಿಕರಲ್ಲಿ, ಯುವಕರಲ್ಲಿ ಹಾಗೂ ವಿದ್ಯಾರ್ಥಿ ಸಮುದಾಯದಲ್ಲಿ ಜಾಗೃತಿ ಮೂಡಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

<table>
<tr><td>ಏಪ್ರಿಲ್ 2019</td><td>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ ಮತ್ತು ಇಂಡಿಯನ್ ಮೆಡಿಕಲ್ ಅಸೋಶಿಯೇಶನ್ ಮಂಗಳೂರು (ರಿ), ಜಂಟಿ ಆಶ್ರಯಲ್ಲಿ ವಿಶ್ವ ಆರೋಗ್ಯ ದಿನದ ಸಲುವಾಗಿ “Mega Health Expo” ಕಾರ್ಯಕ್ರಮದಡಿ ರೆಡ್‌ಕ್ರಾಸ್ ಸ್ಟಾಲ್‌ನ್ನು ದಿನಾಂಕ 06.04.2019 ರಿಂದ 07.04.2019 ರ ತನಕ ಕದ್ರಿ ಪಾರ್ಕ್‌ನಲ್ಲಿ ತೆರೆಯಲಾಗಿತ್ತು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ, ಜಿಲ್ಲಾ ಕಾರಾಗೃಹ, ಮಂಗಳೂರು, ಜಿಲ್ಲಾ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು ಮತ್ತು ಕೆ.ಎಸ್.ಹೆಗ್ಡೆ ಮೆಡಿಕಲ್ ಅಕಾಡಮಿ, ದೇರಳಕಟ್ಟೆ ಇವರ ಜಂಟಿ ಆಶ್ರಯದಲ್ಲಿ ಆರೋಗ್ಯ ಶಿಬಿರವನ್ನು ದಿನಾಂಕ 21.04.2019 ರಂದು ಜಿಲ್ಲಾ ಕಾರಾಗೃಹದಲ್ಲಿ ಏರ್ಪಡಿಸಲಾಗಿತ್ತು.<br><br>➢ ರೆಡ್‌ಕ್ರಾಸ್ ತತ್ವಗಳನ್ನು ಹಾಗೂ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಪ್ರೇರೇಪಿಸುವ ಉದ್ದೇಶದಿಂದ ಅರ್ಹ ಅಭ್ಯರ್ಥಿಗಳಗಾಗಿ 2 ದಿನಗಳ “District Red Cross Resource Persons” ಮತ್ತು ಸರ್ವ್ (Social Emergency Response Volunteers) ಶಿಬಿರವನ್ನು ದಿನಾಂಕ 12.04.2019 ರಿಂದ 13.04.2019 ರಂದು ಸಿ.ಓ.ಡಿ.ಪಿ, ನಂತೂರು ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಚೇರ್‌ಮೆನ್ ಶ್ರೀ. ಸಿ.ಎ. ಶಾಂತರಾಮ್ ಶೆಟ್ಟಿ ಇವರು ಶಿಬಿರದ ಉದ್ಘಾಟನೆ ಮಾಡಿದ್ದು, ಶ್ರೀ ಆಸ್ಕರ್ ಆನಂದ್, ಚೇರ್‌ಮೆನ್, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಪುತ್ತೂರು ತಾಲೂಕು ಶಾಖೆ ಇವರು ಅತಿಥಿಯಾಗಿ ಪಾಲ್ಗೊಂಡಿದ್ದರು.</td></tr>
<tr><td>ಮೇ 2019</td><td>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ ಮತ್ತು ದ.ಕ ಮತ್ತು ಉಡುಪಿ ಜಿಲ್ಲಾ ವಿಶಿಷ್ಟ ಚೇತನರ ಸಂಘ (ರಿ), ಮಂಗಳೂರು ಜಂಟಿ ಆಶ್ರಯಲ್ಲಿ ದಿವ್ಯಾಂಗರಿಗೆ ವೈದ್ಯಕೀಯ ನೆರವು ಮತ್ತು ವಿದ್ಯಾರ್ಥಿ ವೇತನ ವಿತರಣೆಯನ್ನು ದಿನಾಂಕ 05.05.2019 ರಂದು ಪುರಭವನ, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ ಮತ್ತು ಯುವ ರೆಡ್‌ಕ್ರಾಸ್ ಘಟಕ, ಲಕ್ಷ್ಮೀ ಮೆಮೋರಿಯಲ್ ಕಾಲೇಜು ಆಫ್ ನರ್ಸಿಂಗ್ ಸಂಯುಕ್ತ ಆಶ್ರಯದಲ್ಲಿ “ವಿಶ್ವ ರೆಡ್‌ಕ್ರಾಸ್ ದಿನ–2019” ನ್ನು ದಿನಾಂಕ 08.05.2019 ರಂದು ಎ.ಜೆ ಇನ್‌ಸ್ಟಿಟ್ಯೂಟ್ ಅಡಿಟೋರಿಯಂ, ಕುಂಟಿಕಾನ, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆಯ ವತಿಯಿಂದ ವಿಪತ್ತು ನಿರ್ವಹಣೆಗೆ ತಂಡವನ್ನು ರಚಿಸಲು ಸ್ವಯಂಸೇವಕರ ನೋಂದಣಿ ಹಾಗೂ ತರಬೇತಿ ಕಾರ್ಯಕ್ರಮವನ್ನು ದಿನಾಂಕ 10.05.2019 ರಂದು ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣ ಇಲ್ಲಿ ಏರ್ಪಡಿಸಲಾಗಿತ್ತು.<br><br>➢ ದಕ್ಷಿಣ ಕನ್ನಡ ಜಿಲ್ಲಾಡಳಿತ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಘಟಕ, ಜಿಲ್ಲಾ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು, ಮಹಾನಗರ ಪಾಲಿಕೆ, ದಂತ ಆರೋಗ್ಯ ವಿಭಾಗ (ಎಂ.ಸಿ.ಒ.ಡಿ.ಎಸ್), ಮಂಗಳೂರು ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ “ವಿಶ್ವ ತಂಬಾಕು ರಹಿತ ದಿನ–2019” ನ್ನು ದಿನಾಂಕ 31.05.2019 ರಂದು ಪುರಭವನ ಮಂಗಳೂರು ಇಲ್ಲಿ ಏರ್ಪಡಿಲಾಗಿತ್ತು.</td></tr>
</table>

| | |
|---|---|
| ಜೂನ್ 2019 | ➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ ಮತ್ತು ಪಿಲಿಕುಲ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು, ಎಂ.ಆರ್.ಪಿ.ಎಲ್ ಲಿಮಿಟೆಡ್ ಮತ್ತು ಕರ್ನಾಟಕ ವಾಯುಮಾಲಿನ್ಯ ನಿಯಂತ್ರಣ ಮಂಡಳಿ ಇವರ ಜಂಟಿ ಆಶ್ರಯಲ್ಲಿ **"ವಿಶ್ವ ಪರಿಸರ ದಿನ"ವನ್ನು ದಿನಾಂಕ 08.06.2019** ರಂದು ಪಿಲಿಕುಲ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆಯ ವತಿಯಿಂದ **"ವಿಶ್ವ ರಕ್ತದಾನಿಗಳ ದಿನ" ವನ್ನು ದಿನಾಂಕ 14.06.2019** ರಂದು ಪುರಭವನ, ಇಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಅತೀ ಹೆಚ್ಚು ರಕ್ತದಾನ ಮಾಡಿದ 8 ಜನ ದಾನಿಗಳಿಗೆ ಮತ್ತು 2 ಕುಟುಂಬಗಳ ದಾನಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ನಡೆಸಲಾಗಿತ್ತು. ಶಿಬಿರಗಳನ್ನು ಏರ್ಪಡಿಸಿದ ಸಂಘ ಸಂಸ್ಥೆಗಳನ್ನೂ ಪ್ರೋತ್ಸಾಹಿಸಿ, ಗೌರವಿಸಲಾಯಿತು. ಈ ಸಮಾರಂಭದ ಉದ್ಘಾಟನೆಯನ್ನು ಅಪರ ಜಿಲ್ಲಾಧಿಕಾರಿ ಶ್ರೀ. ವೆಂಕಟಾಚಲಪತಿ ಆರ್ ಇವರು ನೆರವೇರಿಸಿದರು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ, ಮಂಗಳೂರು ಮತ್ತು ಪತಂಜಲಿ ಯೋಗ ಸಮಿತಿ ಭಾರತ್ ಸ್ವಾಭಿಮಾನ್ ಟ್ರಸ್ಟ್ ಮತ್ತು ಕರ್ನಾಟಕ ರಾಜ್ಯ ದೇವಾಡಿಗರ ಸಂಘ (ರಿ) ಜಂಟಿಯಾಗಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ. ಎಂ. ಜಗದೀಶ್ ಶೆಟ್ಟಿ, ಬಿಜೈ ಇವರ ಉಸ್ತುವಾರಿಯಲ್ಲಿ **"ಅಂತಾರಾಷ್ಟ್ರೀಯ ಯೋಗ ದಿನ" ವನ್ನು ಜೂನ್ 21, 2019 ರಂದು** ದೇವಾಡಿಗರ ಸಮಾಜ ಭವನ, ಮಣ್ಣಗುಡ್ಡ, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ.ಎಂ. ರಾಮಕೃಷ್ಣ ರಾವ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಇವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆಯ ಚೇರ್‌ಮನ್ ಸಿ.ಎ. ಶಾಂತರಾಮ ಶೆಟ್ಟಿಯವರು ವಹಿಸಿದ್ದರು. 200 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಯೋಗಭ್ಯಾಸ ಮಾಡಿದರು. |
| ಜುಲಾಯಿ 2019 | ➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ, ಮಂಗಳೂರು, ಸರಕಾರಿ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು ಮತ್ತು ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಾರ್‌ಸ್ಟ್ರೀಟ್, ಮಂಗಳೂರು ಇವರ ಜಂಟಿ ಆಶ್ರಯದಲ್ಲಿ **"ಸ್ವಚ್ಛ ಭಾರತ್ ಕಾರ್ಯಕ್ರಮವು" ದಿನಾಂಕ** 13.07.2019, ಶನಿವಾರರಂದು ಅಪರಾಹ್ನ 1.00 ಗಂಟೆಯಿಂದ 4.00 ಗಂಟೆಯವರೆಗೆ ವೆನ್‌ಲಾಕ್ ಆಸ್ಪತ್ರೆಯ ಆವರಣದಲ್ಲಿ ನಡೆಸಲಾಗಿತ್ತು. ವಿದ್ಯಾರ್ಥಿಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸೆ, ದ.ಕ ಜಿಲ್ಲಾ ಶಾಖೆ, ಮಂಗಳೂರು ವತಿಯಿಂದ ಡೆಂಗ್ಯೂ ಪೀಡಿತ ಪ್ರದೇಶಗಳಿಗೆ ದಿನಾಂಕ **22.07.2019 ರಿಂದ 01.08.2019** ರತನಕ ಭೇಟಿ ನೀಡಿ ಮಾಹಿತಿ ಮತ್ತು ಜನ ಜಾಗೃತಿಯನ್ನು ನೀಡಲಾಯಿತು. ಸರ್ವೆ ಕಾರ್ಯಕ್ರಮವನ್ನು ರೆಡ್‌ಕ್ರಾಸ್ ಸ್ವಯಂಸೇವಕರ ಜತೆಗೂಡಿ ನಡೆಸಲಾಯಿತು. |
| ಅಗೋಸ್ತ್ 2019 | ➢ **ದಿ. 02.08.2019ರಿಂದ 04.08.2019ರವರೆಗೆ** ನಡೆದ **ಸರ್ವ್ (SERV - Social Emergency & Response Volunteer) ತರಬೇತಿ**ಯನ್ನು ಸಭಾಪತಿ ಶ್ರೀ ಸಿ.ಎ. ಶಾಂತರಾಮ ಶೆಟ್ಟಿ ಇವರು ಸೆಂಟ್ ಅಲೋಶಿಯಸ್ ಕಾಲೇಜಿನ ಅರೂಪೆ ಸಭಾಂಗಣದಲ್ಲಿ ಉದ್ಘಾಟಿಸಿದರು. ಈ ತರಬೇತಿ ಕಾರ್ಯಕ್ರಮವನ್ನು ಜಿಲ್ಲಾ ಯುವ ರೆಡ್‌ಕ್ರಾಸ್ ಸಂಯೋಜಕರು ಸಂಘಟಿಸಿದ್ದರು.<br><br>➢ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ವತಿಯಿಂದ **ಜಿಲ್ಲಾ ಕಾರಾಗೃಹಕ್ಕೆ ಒಂದು ಸ್ಟೆಚ್ಚರ್ (stretcher)** ನ್ನು ಅಧೀಕ್ಷಕರು, ಜಿಲ್ಲಾ ಕಾರಾಗೃಹ ಇವರಿಗೆ ಶ್ರೀ. ಎಸ್‌ಎ ಪ್ರಭಾಕರ ಶರ್ಮ ಮತ್ತು ಶ್ರೀ. ಯತೀಶ್ ಬೈಕಂಪಾಡಿ ಇವರು **ದಿನಾಂಕ 03.08.2019** ರಂದು ಹಸ್ತಾಂತರಿಸಿದರು.<br><br>➢ **ದಿ. 05.08.2019**ರಂದು ರೆಡ್‌ಕ್ರಾಸ್‌ನ 25 ಸ್ವಯಂಸೇವಕರು ಸುಳ್ಯ ತಾಲೂಕಿನ ಅರಂತೋಡಿನಲ್ಲಿ ಗಂಭೀರ ಪ್ರವಾಹ ಪರಿಸ್ಥಿತಿಯಲ್ಲಿ ಸಿಲುಕಿದ್ದ ಸಂತ್ರಸ್ತರನ್ನು ರಕ್ಷಿಸುವಲ್ಲಿ ಯಶಸ್ವಿಯಾದರು.<br><br>➢ **ದಿ. 05.08.2019**ರಂದು ರೆಡ್‌ಕ್ರಾಸ್‌ನ 20 ಸ್ವಯಂಸೇವಕರು ಮಂಗಳೂರು ತಾಲೂಕಿನ ತೊಕ್ಕೊಟ್ಟಿನ ಮಾರ್ಗತಲೆ ಎಂಬಲ್ಲಿ ಗಂಭೀರ ಪ್ರವಾಹ ಪರಿಸ್ಥಿತಿಯಲ್ಲಿ ಸಿಲುಕಿದ್ದ ಸಂತ್ರಸ್ತರನ್ನು ರಕ್ಷಿಸುವಲ್ಲಿ ಯಶಸ್ವಿಯಾದರು.<br><br>➢ ಜಿಲ್ಲಾಡಳಿತ, ದ.ಕ ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬ್ಯಾಂಕ್ ಆಫ್ ಬರೋಡ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ ಇವರ ಸಹಯೋಗದಲ್ಲಿ **"ಮಂಗಳೂರು ನಗರದ ಅಂಗನವಾಡಿ ಕೇಂದ್ರಗಳಿಗೆ ಸೊಳ್ಳೆ ಪರದೆ ವಿತರಣೆ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ ಡೆಂಗ್ಯೂ ಬಗ್ಗೆ ಜಾಗೃತಿ"** ಕಾರ್ಯಕ್ರಮವನ್ನು **ದಿನಾಂಕ 06.08.2019,** ಮಂಗಳವಾರ ಸಮಯ: ಮಧ್ಯಾಹ್ನ 3.00ಗಂಟೆ, ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣ, 2ನೇ ಮಹಡಿ ಇಲ್ಲಿ ಏರ್ಪಡಿಸಲಾಗಿತ್ತು. 150 ಅಂಗನವಾಡಿಗಳಿಗೆ ಸೊಳ್ಳೆ ಪರದೆಗಳನ್ನು ಅಪರ ಜಿಲ್ಲಾಧಿಕಾರಿಯಾದ ಶ್ರೀಮತಿ ಎಂ.ಜೆ ರೂಪಾ ರವರು ವಿತರಿಸಿದರು. |

| | |
|---|---|
| | ➢ ದಿ. 07.08.2019ರಂದು ಬೆಳ್ತಂಗಡಿ ತಾಲೂಕಿನಲ್ಲಿ ನಮ್ಮ ರೆಡ್‌ಕ್ರಾಸ್‌ನ 22 ಸ್ವಯಂಸೇವಕರು ಮಣ್ಣು ಕುಸಿತದಿಂದ ಉಂಟಾದ ರಸ್ತೆ ತಡೆಯನ್ನು ತೆಗೆದು ಪ್ರಯಾಣಿಕರಿಗೆ ಅಪಾರ ಸಹಾಯವನ್ನು ಮಾಡಿದರು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕಜಿಲ್ಲಾ ಶಾಖೆಯ ವತಿಯಿಂದ **ದಿನಾಂಕ 08.08.2019** ರಂದು ದಾನಿಗಳಿಂದ ಪಡೆದ 2 **ವೀಲ್ ಚೇರ್‌ಗಳನ್ನು ಮಂಗಳೂರು ಜಂಕ್ಷನ್ ರೈಲ್ವೇ ಸ್ಟೇಷನ್‌ಗೆ ಹಸ್ತಾಂತರಿಸಿದರು**. ಕಾರ್ಯದರ್ಶಿ ಶ್ರೀ. ಎಸ್.ಎ. ಪ್ರಭಾಕರ ಶರ್ಮರವರು ಆಡಳಿತ ಮಂಡಳಿ ಸದಸ್ಯರಾದ ಶ್ರೀ. ರವೀಂದ್ರನಾಥ್ ಕೆ, ಮತ್ತು ಕೋ-ಆಡಿನೇಟರ್ ಶ್ರೀ. ಪ್ರವೀಣ್‌ಕುಮಾರ್ ಇವರು ಉಪಸ್ಥಿತರಿದ್ದರು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕಜಿಲ್ಲಾ ಶಾಖೆಯ ವತಿಯಿಂದ **ದಿನಾಂಕ 12.08.2019 ರಂದು 08 ಕಿಚನ್ ಸೆಟ್ ಮತ್ತು ಬ್ಲಾಕೆಟ್‌ಗಳನ್ನು ಜಿಲ್ಲಾಡಳಿತ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ಕೆ.ಪಿ.ಟಿ ಮಂಗಳೂರು ಇಲ್ಲಿಗೆ ಹಸ್ತಾಂತರಿಸಲಾಯಿತು**. ಕಾರ್ಯದರ್ಶಿ ಶ್ರೀ.ಎಸ್. ಎ. ಪ್ರಭಾಕರ ಶರ್ಮ, ಆಡಳಿತ ಮಂಡಳಿ ಸದಸ್ಯರು ಶ್ರೀ.ರವೀಂದ್ರನಾಥ್ ಕೆ ಹಾಗೂ ಶ್ರೀ. ಯತೀಶ್ ಬೈಕಂಪಾಡಿ ಇವರು ಉಪಸ್ಥಿತರಿದ್ದರು.<br><br>➢ **ದಿನಾಂಕ 15.08.2019** ರಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ ಮಾನವೀಯ ಸೇವೆಯಲ್ಲಿ ಮುಂಚೂಣಿಯಲ್ಲಿದ್ದು, ಉತ್ತರ ಕನ್ನಡರಾಜ್ಯದ ನೆರೆ ಪೀಡಿತ ಸಂತ್ರಸ್ತರಿಗೆ ಸಹಾಯ ಹಸ್ತ ನೀಡಲು ಮುಂದಾಗಿದ್ದು, ಜನರಿಗೆ ತುರ್ತಾಗಿ ಅಗತ್ಯವಾಗಿ ಬೇಕಾದ ನೀರು, ಹಾಲು, ನೆಲ ಹಾಸು, ಬ್ಲಾಕೆಟ್ಸ್, ಬೆಡ್‌ಶೀಟ್, ಮಕ್ಕಳ ಬಟ್ಟೆಗಳು, ಟೂತ್‌ಪೇಸ್ಟ್ ಮತ್ತು ಬ್ರಷ್ ಮತ್ತು ಬಿಸ್ಕಟ್‌ಗಳನ್ನು ಜಿಲ್ಲಾಡಳಿತ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಕೆ.ಪಿ.ಟಿ, ಮಂಗಳೂರು ಇಲ್ಲಿಗೆ ಹಸ್ತಾಂತರಿಸಲಾಯಿತು. ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆಯ ಚೇರ್‌ಮೆನ್ ಶ್ರೀ. ಶಾಂತರಾಮ ಶೆಟ್ಟಿ, ಕಾರ್ಯದರ್ಶಿ ಶ್ರೀ. ಎಸ್.ಎ. ಪ್ರಭಾಕರ ಶರ್ಮ, ಆಡಳಿತ ಮಂಡಳಿ ಸದಸ್ಯರು ಶ್ರೀ. ರವೀಂದ್ರನಾಥ್ ಕೆ. ಮತ್ತು ಕೋ-ಆಡಿನೇಟರ್ ಶ್ರೀ. ಪ್ರವೀಣ್‌ಕುಮಾರ್ ಇವರು ಉಪಸ್ಥಿತರಿದ್ದರು.<br><br>➢ **ದಿನಾಂಕ 19.08.2019 ರಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕಜಿಲ್ಲಾ ಶಾಖೆ ವತಿಯಿಂದ ಪಚ್ಚನಾಡಿ ಘನತ್ಯಾಜ್ಯ ಕುಸಿತದಿಂದ ಮಂದಾರ ಪ್ರದೇಶದ ಸಂತ್ರಸ್ತರ ಜತೆ ಸಹ ಭೋಜನ ಏರ್ಪಡಿಸಲಾಗಿತ್ತು**. ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕಜಿಲ್ಲಾ ಶಾಖೆಯ ಚೇರ್‌ಮೆನ್ ಶ್ರೀ.ಶಾಂತರಾಮ ಶೆಟ್ಟಿ, ವೈಸ್ ಚೇರ್‌ಮೆನ್ ಶ್ರೀ. ನಿತ್ಯಾನಂದ ಶೆಟ್ಟಿ, ಕಾರ್ಯದರ್ಶಿ ಶ್ರೀ.ಎಸ್. ಎ. ಪ್ರಭಾಕರ ಶರ್ಮ, ಆಡಳಿತ ಮಂಡಳಿ ಸದಸ್ಯರಾದ ಶ್ರೀ.ರವೀಂದ್ರನಾಥ್ ಕೆ, ಶ್ರೀ. ಯತೀಶ್ ಬೈಕಂಪಾಡಿ ಮತ್ತು ಶ್ರೀ ಬಿ. ರವೀಂದ್ರ ಶೆಟ್ಟಿ ಇವರು ಉಪಸ್ಥಿತರಿದ್ದರು.<br><br>➢ ಪುತ್ತೂರಿನ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಮತ್ತು ಅಂಗನವಾಡಿ, ಮಚ್ಚಿಮಲೆ ಇಲ್ಲಿ 22 ಕೊಡೆಗಳನ್ನು ಮತ್ತು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಅಂಗನವಾಡಿ, ವಡ್ಯ ಇಲ್ಲಿ 64 ಕೊಡೆಗಳನ್ನು ಮಕ್ಕಳಿಗೆ ವಿತರಿಸಲಾಯಿತು. |
| ಸೆಪ್ಟೆಂಬರ್ 2019 | ➢ **ದಿ. 01.09.2019**ರಂದು ರೋಟರಿ ಕ್ಲಬ್ ಕುಡ್ಲ, ಕುಂದಾಪುರ ಗ್ರೂಪ್, ಹೋಲಿ ಚರ್ಚ್ ದೇರೆಬೈಲ್ ಮತ್ತು ರೆಡ್‌ಕ್ರಾಸ್ ಮಂಗಳೂರು ಇವರು ಸಂಗ್ರಹಿಸಿದ ಸುಮಾರು 6 ಲಕ್ಷ ಮೌಲ್ಯದ ಆಹಾರ ಧಾನ್ಯಗಳನ್ನು ಬೆಳ್ತಂಗಡಿ ತಾಲೂಕಿನ ಪ್ರವಾಹ ಸಂತ್ರಸ್ತರಿಗೆ ತಾಲೂಕು ತಹಶೀಲ್ದಾರರ ಮೂಲಕ ವಿತರಿಸಲಾಯಿತು.<br><br>➢ **ದಿ. 01.09.2019**ರಂದು ಯುವ ರೆಡ್‌ಕ್ರಾಸ್ ಸ್ವಯಂಸೇವಕರು ಮತ್ತು ರೋವರ್ಸ್ ಹಾಗೂ ಎನ್.ಎಸ್.ಎಸ್ ವಿದ್ಯಾರ್ಥಿಗಳು ಬೆಳ್ತಂಗಡಿ ತಾಲೂಕಿನ ಅಂತರಾ ಗ್ರಾಮದ ಪ್ರವಾಹ ಸಂತ್ರಸ್ತರಿಗೆ ಪುನರ್‌ವಸತಿಯಲ್ಲಿ ಸಹಾಯ ಮಾಡಿದರು.<br><br>➢ ದಿ. **07.08.2019 ಮತ್ತು 08.09.2019**ರಂದು ಸುಳ್ಯ ತಾಲೂಕಿನ ಕೆವಿಜಿ ಪೋಲಿಟೆಕ್ನಿಕ್‌ನಲ್ಲಿ **ಸರ್ವ್ (SERV - Social Emergency & Response Volunteer) ತರಬೇತಿ ಕಾರ್ಯಕ್ರಮ**ವನ್ನು ನಡೆಸಲಾಯಿತು. ಡಾ. ಅನುರಾಧ ಕುರುಂಜಿ, ರೆಡ್‌ಕ್ರಾಸ್ ಯೋಜನಾಧಿಕಾರಿಯವರು ಹಾಜರಿದ್ದು ಶ್ರೀ ಸಚೇತ್ ಸುವರ್ಣ ಇವರು ತರಬೇತಿಯನ್ನು ನೀಡಿದರು. ಶ್ರೀ ಬಾಲಕೃಷ್ಣ ಗೌಡ, ಪ್ರಾಂಶುಪಾಲರು ಹಾಜರಿದ್ದ ಎಲ್ಲಾ 31 ತರಬೇತಿದಾರರಿಗೆ ಮಾರ್ಗದರ್ಶನ ಮಾಡಿದರು.<br><br>➢ **ದಿನಾಂಕ 18.09.2019 ರಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ ವತಿಯಿಂದ ಪಚ್ಚನಾಡಿ ಘನತ್ಯಾಜ್ಯ ಕುಸಿತದಿಂದ ಮಂದಾರ ಪ್ರದೇಶದ 27 ಸಂತ್ರಸ್ತ ಕುಟುಂಬಗಳಿಗೆ ದಿನೋಪಯೋಗಿ ಪರಿಕರಗಳು ಮತ್ತು ಕಿಚನ್ ಸೆಟ್ ನ್ನು ನೀಡಲಾಯಿತು**. ಮಂಗಳೂರು ನಗರ ಪಾಲಿಕೆ ಆಯುಕ್ತರು ಶ್ರೀ. ಅಜಿತ್ ಕುಮಾರ್ ಹೆಗ್ಡೆ ಶಾನಾಡಿ, ಸಂಸ್ಥೆಯ ಚೇರ್‌ಮೆನ್ ಶ್ರೀ. ಶಾಂತರಾಮ ಶೆಟ್ಟಿ, ಕಾರ್ಯದರ್ಶಿ ಎಸ್.ಎ ಪ್ರಭಾಕರ ಶರ್ಮ, ಶ್ರೀ. ರವೀಂದ್ರನಾಥ ಕೆ ಮತ್ತು ರೆಡ್‌ಕ್ರಾಸ್ ಕೋ-ಆಡಿನೇಟರ್ ಶ್ರೀ. ಪ್ರವೀಣ್ ಕುಮಾರ್ ಉಪಸ್ಥಿತರಿದ್ದರು.<br><br>➢ **ದಿನಾಂಕ 21.09.2019 ರಂದು ಬೆಳ್ತಂಗಡಿ ತಾಲೂಕು ಶಾಖೆ ಉದ್ಘಾಟಿಸಲಾಯಿತು**. ಜಿಲ್ಲಾ ಶಾಖೆ ಚೇರ್‌ಮೆನ್ ಶ್ರೀ. ಶಾಂತರಾಮ್ ಶೆಟ್ಟಿ ಇವರು ತಹಶೀಲ್ದಾರರು ಮತ್ತು ಅಧ್ಯಕ್ಷರು ಶ್ರೀ. ಗಣಪತಿ ಶಾಸ್ತ್ರಿ ಇವರಿಗೆ ರೆಡ್‌ಕ್ರಾಸ್ ಬೈಲಾ |

| | |
|---|---|
| | ಪುಸ್ತಕವನ್ನು ಹಸ್ತಾಂತರಿಸಿದರು. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ದಕ್ಷಿಣ ಕನ್ನಡ ಜಿಲ್ಲಾ ಶಾಖೆಯ ಚೇರ್‌ಮೆನ್ ಶ್ರೀ ಸಿಎ. ಶಾಂತಾರಾಮ ಶೆಟ್ಟಿ ಹಾಗೂ ಜಿಲ್ಲಾ ಶಾಖೆ ಕಾರ್ಯದರ್ಶಿ ಶ್ರೀ ಎಸ್.ಎ. ಪ್ರಭಾಕರ ಶರ್ಮ ಇವರು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಬೈಲಾ ಬಗ್ಗೆ ಮಾಹಿತಿಯನ್ನು ನೀಡಿದರು. ಬೆಳ್ತಂಗಡಿ ತಾಲೂಕಿನಲ್ಲಿ ಕೂಡ ಈ ಅಂತರಾಷ್ಟ್ರೀಯ ಸಂಸ್ಥೆಗೆ ಬುನಾದಿ ಹಾಕಲು ಕರೆ ನೀಡಿದರು. |
| ಅಕ್ಟೋಬರ್ 2019 | ➢ ನಮ್ಮ ರೆಡ್‌ಕ್ರಾಸ್ ಶಾಖೆಯು ಮತ್ತು SDM ಮಾನೇಜ್‌ಮೆಂಟ್ ಕಾಲೇಜು ಹಾಗೂ SDM ರೋಟರಾಕ್ಟ್ ಕ್ಲಬ್ **ದಿ. 01.10.2019**ರಂದು ರಾಷ್ಟ್ರೀಯ ಸ್ವಯಂಪ್ರೇರಿತಾ ರಕ್ತದಾನ ದಿನವನ್ನು ಅದೇ ಕಾಲೇಜಿನಲ್ಲಿ ಆಚರಿಸಿದರು.<br><br>➢ **ದಿನಾಂಕ 16.10.2019 ರಂದು** ಯುವ ರೆಡ್‌ಕ್ರಾಸ್ ಘಟಕವನ್ನು ಮಂಗಳೂರು ವಿಶ್ವ ವಿದ್ಯಾನಿಲಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಲು ಮಂಗಳೂರು ವಿಶ್ವ ವಿದ್ಯಾನಿಲಯದ ಉಪಕುಲಪತಿಗಳಾದ ಶ್ರೀ. ಪಿ.ಎಸ್. ಯಡಪಡಿತ್ತಾಯ"ರವರು ಸಭೆಯನ್ನು ಕರೆದಿದ್ದರು. ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಎಲ್ಲಾ ಕಾಲೇಜುಗಳಲ್ಲಿ **"ಯುವ ರೆಡ್‌ಕ್ರಾಸ್"** ವನ್ನು ಪ್ರಾರಂಭಿಸುವುದರೊಂದಿಗೆ ಅತೀ ಹೆಚ್ಚು ಮಾನವೀಯ ಸೇವೆಯ ಚಟುವಟಿಕೆಗಳಲ್ಲಿ ಯುವ ರೆಡ್‌ಕ್ರಾಸ್ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.<br><br>ಹೊಸದಾಗಿ ಆಯ್ಕೆಯಾದ ವಿಶ್ವ ವಿದ್ಯಾನಿಲಯದ ನೋಡೆಲ್ ಅಧಿಕಾರಿ ಡಾ. ಗಣಪತಿ ಗೌಡ ಇವರು ಇದರ ಜವಾಬ್ದಾರಿಯನ್ನು ತೆಗೆದುಕೊಂಡಿದ್ದು, ಈ ಸಭೆಯಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆಯ ಚೇರ್‌ಮೆನ್ ಸಿಎ. ಶಾಂತರಾಮ ಶೆಟ್ಟಿ ಹಾಗೂ ಗೌರವ ಕಾರ್ಯದರ್ಶಿ ಶ್ರೀ ಎಸ್.ಎ. ಪ್ರಭಾಕರ ಶರ್ಮ, ಜಿಲ್ಲಾ ಯುವ ರೆಡ್‌ಕ್ರಾಸ್ ಕೋ-ಆಡಿನೇಟರ್ ಶ್ರೀ. ಸಚೇತ್ ಸುವರ್ಣ, ವಿಪತ್ತು ನಿರ್ವಹಣಾ ಸಮಿತಿಯ ಚೇರ್‌ಮೆನ್ ಶ್ರೀ. ಯತೀಶ್ ಬೈಕಂಪಾಡಿ ಹಾಗೂ ವಿಕಲ ಚೇತನರ ಉಪಸಮಿತಿ ಚೇರ್‌ಮೆನ್ ಶ್ರೀ. ರವೀಂದ್ರನಾಥ್ ಕೆ ಅವರು ಉಪಸ್ಥಿತರಿದ್ದರು.<br>ಉಡುಪಿ, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗಳಿಂದ ಯುವ ರೆಡ್‌ಕ್ರಾಸ್ ಪ್ರತಿನಿಧಿಗಳು ಭಾಗವಹಿಸಿದ್ದರು.<br><br>➢ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ದ.ಕ ಜಿಲ್ಲಾ ಶಾಖೆ ಮಂಗಳೂರು ಮತ್ತು ಕೊಲಾಸೋ ಕಾಲೇಜು ಆಫ್ ಪಾರಾಮೆಡಿಕಲ್ ಸ್ಯಾಯನ್ಸ್, ಕಂಕನಾಡಿ, ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ **ವಿಪತ್ತು ತಗ್ಗಿಸುವ ಬಗ್ಗೆ ಅರಿವು ಮೂಡಿಸುವ ಕಾರ್ಯಗಾರವನ್ನು ದಿನಾಂಕ 23 ಅಕ್ಟೋಬರ್ 2019,** ಬುಧವಾರ ದಂದು ಕೊಲಾಸೋ ಕಾಲೇಜು ಆಫ್ ಪಾರಾಮೆಡಿಕಲ್ ಸ್ಯಾಯನ್ಸ್, ಕಂಕನಾಡಿ, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ. ಎಸ್.ಎ ಪ್ರಭಾಕರ ಶರ್ಮ, ಗೌ.ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಇವರು ದೀಪ ಬೆಳಗಿಸುವುದರೊಂದಿಗೆ ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಶ್ರೀಮತಿ ಶ್ರದ್ಧಾ, ಪ್ರಾಂಶುಪಾಲರು ಕೊಲಾಸೋ ಕಾಲೇಜು ಆಫ್ ಪಾರಾಮೆಡಿಕಲ್ ಸ್ಯಾಯನ್ಸ್, ಕಂಕನಾಡಿ, ಮಂಗಳೂರು, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಗೌ. ಖಚಾಂಚಿ, ಶ್ರೀ. ಆರ್ಚಿಬಾಲ್ಡ್ ಮೆನೇಜಸ್, ಶ್ರೀ. ಯತೀಶ್ ಬೈಕಂಪಾಡಿ, ಆಡಳಿತ ಮಂಡಳಿ ಸದಸ್ಯರು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಶ್ರೀ. ಪ್ರವೀಣ್ ಕುಮಾರ್ – ರೆಡ್‌ಕ್ರಾಸ್ ಕೋ-ಆಡಿನೇಟರ್ ಇವರು ಉಪಸ್ಥಿತರಿದ್ದರು. ಶ್ರೀ. ಪ್ರತೀಮ್ ಕುಮಾರ್ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದರು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ, ಎನ್.ಎಂ.ಪಿ.ಟಿ. ಮಂಗಳೂರು ಇದರ ವತಿಯಿಂದ **ಆಕ್ಟೋಬರ್ 31, 2019ರಂದು "ರಾಷ್ಟ್ರೀಯ ಏಕತಾ ದಿವಸ"**ವನ್ನು ಆಚರಿಸಲಾಯಿತು. ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಾಯಿ ಪಟೇಲರವರ ಜನ್ಮ ದಿನ ಹಾಗೂ ದಿವಂಗತ ಮಾಜಿ ಪ್ರಧಾನ ಮಂತ್ರಿ, ಭಾರತರತ್ನ ಶ್ರೀಮತಿ ಇಂದಿರಾಗಾಂಧಿ ಇವರ ಪುಣ್ಯ ಸ್ಮರಣೆಯ ಅಂಗವಾಗಿ ಎನ್.ಎಂ.ಪಿ.ಟಿ, ರೆಡ್‌ಕ್ರಾಸ್ ಕ್ಲಿನಿಕ್ ಆವರಣದಲ್ಲಿ ಬೃಹತ್ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಎನ್.ಎಂ.ಪಿ.ಟಿ ಚೇರ್‌ಮೆನ್ ಶ್ರೀ. ವೆಂಕಟರಮಣ ಅಕ್ಕರಾಜು ಇವರು ದೀಪ ಬೆಳಗಿಸುವುದರೊಂದಿಗೆ ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಡಾ. ಶ್ರೀನಿವಾಸಲು, Chief Medical Officer, NMPT ಶ್ರೀ. ಸತೀಶ್ ಹೊನ್ನಕಕಟ್ಟೆ, ಚೀಫ್ ಮೆಕ್ಯಾನಿಕಲ್ ಇಂಜಿನಿಯರ್ ಎನ್.ಎಂ.ಪಿ.ಟಿ, ಶ್ರೀ. ಸಿಎ. ಶಾಂತರಾಮ ಶೆಟ್ಟಿ, ಚೇರ್‌ಮೆನ್ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ, ಶ್ರೀ. ಎಸ್.ಎ ಪ್ರಭಾಕರ ಶರ್ಮ, ಗೌ.ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಶ್ರೀ. ಪ್ರವೀಣ್ ಕುಮಾರ್ – ರೆಡ್‌ಕ್ರಾಸ್ ಕೋ-ಆಡಿನೇಟರ್ ಇವರು ಉಪಸ್ಥಿತರಿದ್ದರು. |
| ನವೆಂಬರ್ 2019 | ➢ **ದಿ.** 04.11.2019ರಂದು SDM ಮಾನೇಜ್‌ಮೆಂಟ್ ಕಾಲೇಜಿನಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪೌಷ್ಠಿಕಾಂಶ ಜಾಗೃತಿ ಮೂಡಿಸಲು ಕಾರ್ಯಕ್ರಮವನ್ನು ನಡೆಸಲಾಯಿತು.<br><br>➢ **ಸರ್ವ್ (SERV) ತರಬೇತಿ ಕಾರ್ಯಕ್ರಮವನ್ನು ದಿನಾಂಕ 02.11.2019 ಮತ್ತು ದಿನಾಂಕ 03.11.2019** ರಂದು ಸಹ್ಯಾದ್ರಿ ಕಾಲೇಜು ಆಫ್ ಇಂಜಿನಿಯರಿಂಗ್ & ಮ್ಯಾನೇಜ್‌ಮೆಂಟ್, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಅಧ್ಯಕ್ಷತೆಯನ್ನು ಚೇರ್‌ಮೆನ್ ಶ್ರೀ. ಸಿಎ. ಶಾಂತರಾಮ್ ಶೆಟ್ಟಿ ಇವರು ವಹಿಸಿದ್ದರು. ಈ ಕಾರ್ಯಗಾರ ಉದ್ಘಾಟನೆಯನ್ನು ಭಾರತೀಯ |

| | |
|---|---|
| | ರೆಡ್‌ಕ್ರಾಸ್ ಸಂಸ್ಥೆಯ ಚೇರ್‌ಮೆನ್ ಸಿ.ಎ. ಶಾಂತರಾಮ ಶೆಟ್ಟಿ ನೆರವೇರಿಸಿದ್ದು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಶ್ರೀನಿವಾಸ್ ರಾವ್ ಕುಂಟಿ ವಹಿಸಿದ್ದು, ಮುಖ್ಯ ಅಥಿತಿಯಾಗಿ ರೆಡ್‌ಕ್ರಾಸ್ ಸಂಸ್ಥೆಯ ಗೌರವ ಕಾರ್ಯದರ್ಶಿ ಎಸ್.ಎ ಪ್ರಭಾಕರ ಶರ್ಮ ಆಗಮಿಸಿದ್ದರು. ಕಾರ್ಯಕ್ರಮ ನಿರೂಪಣೆಯನ್ನು ಸಹ್ಯಾದ್ರಿ ಕಾಲೇಜಿನ ಆಡಳಿತ ಸಂಯೋಜಕರಾದ ಲತಾರವರು ನಿರೂಪಿಸಿದ್ದರು.<br><br>➢ **ದಿ. 19.11.2019**ರಂದು ಯೆನಪೋಯ ನರ್ಸಿಂಗ್ ಕಾಲೇಜು ಆಸ್ಪತ್ರಯಲ್ಲಿ ಯುವ ರೆಡ್‌ಕ್ರಾಸ್ ಘಟಕವನ್ನು ಉದ್ಘಾಟಿಸಿ ರೆಡ್‌ಕ್ರಾಸ್ ತತ್ವಗಳ ಬಗ್ಗೆ ತರಬೇತಿ ನೀಡಲಾಯಿತು. ಡಾ. ಸಿ.ವಿ. ರಘುವೀರ್, ಪ್ರೊ. ಉಪ ಕುಲಪತಿ ಹಾಜರಿದ್ದರು. ಚೇರ್‌ಮನ್ ಸಿ.ಎ. ಶಾಂತರಾಮ ಶೆಟ್ಟಿ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. |
| ಡಿಸೆಂಬರ್ 2019 | ➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆಯ 2018–19 ರ **ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 01.12.2019** ರಂದು, ಆದಿತ್ಯವಾರ ಪೂರ್ವಾಹ್ನ 10.30 ಗಂಟೆಗೆ ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ ಜರಗಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿಯಾದ ಶ್ರೀಮತಿ ಸಿಂಧು ಬಿ. ರೂಪೇಶ್ ಐ.ಎ.ಎಸ್ ಇವರು ವಹಿಸಿದ್ದರು. ಸಭೆಯಲ್ಲಿ ಚೇರ್‌ಮೆನ್ ಸಿ.ಎ. ಶಾಂತರಾಮ ಶೆಟ್ಟಿ, ವೈಸ್ ಚೇರ್‌ಮೆನ್ ಬಿ. ನಿತ್ಯಾನಂದ ಶೆಟ್ಟಿ, ಗೌರವ ಖಚಾಂಚಿ ಶ್ರೀ. ಆರ್ಚಿಬಾಲ್ಡ್ ಮೆನೇಜಸ್ ಹಾಗೂ ಗೌರವ ಕಾರ್ಯದರ್ಶಿ, ಶ್ರೀ. ಎಸ್.ಎ. ಪ್ರಭಾಕರ ಶರ್ಮ ಹಾಗೂ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.<br><br>➢ ಗೋವನಿತಾಶ್ರಯ ಟ್ರಸ್ಟ್ (ರಿ) ಮಂಗಳೂರು ವತಿಯಿಂದ 20 ನೇ ವರ್ಷದ ಸಾರ್ಥಕ ಗೋವು ಸೇವೆಯ ನಿಮಿತ್ತ **ಗೋಮಂಡಲ ಕಾರ್ಯಕ್ರಮ 07, 08 ಡಿಸೆಂಬರ್ 2019** ರಂದು 2 ದಿನಗಳ ಕಾರ್ಯಕ್ರಮವನ್ನು ನೆಹರೂ ಮೈದಾನದಲ್ಲಿ ಕೈಗೊಂಡಿದ್ದು ಇದರಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಮಳಿಗೆಯನ್ನು ತೆರೆದಿದ್ದು ಇದರಲ್ಲಿ ರೆಡ್‌ಕ್ರಾಸ್ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತು.<br><br>➢ **ದಿನಾಂಕ 08.12.2019** ರಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ, ರೋಟರಿ ಕ್ಲಬ್ ಮಂಗಳೂರು ಪೂರ್ವ, ಲ್ಯಾಂಡ್ ಲಿಂಕ್ಸ್ ಫ್ರೆಂಡ್ಸ್ ಅಸೋಸಿಯೇಷನ್ ಮತ್ತು ಎ.ಜೆ ಆಸ್ಪತ್ರೆ ಇವರ ಸಹಭಾಗಿತ್ವದಲ್ಲಿ **ವಿಶ್ವ ಮಧುಮೇಹ ದಿನಾಚರಣೆ**ಯ ಪ್ರಯುಕ್ತ ರಕ್ತದಾನ ಶಿಬಿರ ಮತ್ತು ಉಚಿತ ಆರೋಗ್ಯ ಮತ್ತು ದಂತ ತಪಸಣಾ ಶಿಬಿರವನ್ನು ಶ್ರೀರಾಮ ಭಜನಾ ಮಂದಿರ, ಲ್ಯಾಂಡ್ ಲಿಕ್ಸ್ ಇಲ್ಲಿ ಏರ್ಪಡಿಸಲಾಗಿತ್ತು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆಯ ವತಿಯಿಂದ **ವಿಶ್ವ ಏಡ್ಸ್ ದಿನವನ್ನು ದಿನಾಂಕ 07.12.2019** ಸ್ನೇಹ ದೀಪ, ಕೊಟ್ಟಾರ ಇಲ್ಲಿ ಏರ್ಪಡಿಸಲಾಗಿತ್ತು.<br><br>➢ **ದಿನಾಂಕ 09.12.2019 ಯುವ ರೆಡ್‌ಕ್ರಾಸ್ ವಾರ್ಷಿಕ ವಿಶೇಷ ಶಿಬಿರ**ವನ್ನು ಡಾ. ಪಿ. ದಯಾನಂದ ಪೈ – ಪಿ. ಸತೀಶ್ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾರ್ ಸ್ಟ್ರೀಟ್, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಶಿಬಿರದ ಉದ್ಘಾಟನೆಯನ್ನು ಸಿ.ಎ. ಶಾಂತರಾಮ ಶೆಟ್ಟಿ, ಚೇರ್‌ಮೆನ್ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ ಇವರು ನೆರವೇರಿಸಿದರು. ಮಂಗಳೂರು ವಿಶ್ವವಿದ್ಯಾನಿಲಯ ಯುವ ರೆಡ್‌ಕ್ರಾಸ್‌ನ ನೋಡಲ್ ಅಧಿಕಾರಿ ಡಾ. ಗಣಪತಿ ಗೌಡ ಅತಿಥಿಗಳಾಗಿ ಭಾಗವಹಿಸಿದ್ದರು.<br><br>➢ **ದಿ. 19.12.2019** ರಂದು ಮಂಗಳೂರು ವಿಶ್ವವಿದ್ಯಾನಿಲಯದ ಯುವ ರೆಡ್‌ಕ್ರಾಸ್ ಯೋಜನಾಧಿಕಾರಿಗಳಿಗೆ ತರಬೇತಿಯನ್ನು ಡಾ. ಶಿವರಾಮ ಕಾರಂತ ಭವನ, ಯುನಿವರ್ಸಿಟಿ ಕಾಲೇಜು, ಮಂಗಳೂರು ಇಲ್ಲಿ ನಡೆಸಲಾಯಿತು. ಇದರಲ್ಲಿ ಉಡುಪಿ ಹಾಗೂ ಕೊಡಗು ಜಿಲ್ಲೆಯ ಯೋಜನಾಧಿಕಾರಿಗಳು ಭಾಗವಹಿಸಿದ್ದು, ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಯವರಾದ ಪ್ರೊ. ಪಿ.ಎಸ್. ಎಡಪಡಿತ್ತಾಯ ಇವರು ವಿದ್ಯಾರ್ಥಿಗಳನ್ನು ರೆಡ್‌ಕ್ರಾಸ್ ತತ್ವಗಳ ಹಿನ್ನೆಲೆಯಲ್ಲಿ ಪ್ರೇರೇಪಿಸಿ ಸಮಾಜ ಸೇವೆಗೆ ಪ್ರೋತ್ಸಾಹಿಸಲು ಕರೆನೀಡಿದರು. ಸಿ.ಎ. ಶಾಂತರಾಮ ಶೆಟ್ಟಿ, ಸಭಾಪತಿ, ಡಾ. ಉದಯ ಕುಮಾರ್ ಎಂ.ಎ, ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಡಾ. ಗಣಪತಿ ಗೌಡ, ಯುವ ರೆಡ್‌ಕ್ರಾಸ್ ಮಂಗಳೂರು ವಿಶ್ವವಿದ್ಯಾನಿಲಯ, ನೋಡಲ್ ಅಧಿಕಾರಿ ಇವರು ಉಪಸ್ಥಿತರಿದ್ದರು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆಯ **ದಿನಾಂಕ 27.12.2019 ರಂದು ಅಂತರಾಷ್ಟ್ರೀಯ ಸ್ವಯಂಸೇವಕರ ದಿನ**ವನ್ನು ಕಾಂಚನ ಹೋಂಡ, ಕಂಕನಾಡಿ, ಮಂಗಳೂರು ಇಲ್ಲಿ ಅತ್ಯಂತ ಸಂಭ್ರಮದ ಆಚರಿಸಲಾಯಿತು. ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಸ್ವಯಂಸೇವಕರ ಪಾತ್ರವನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆಯ ಗೌರವ ಕಾರ್ಯದರ್ಶಿ ಎಸ್.ಎ. ಪ್ರಭಾಕರ ಶರ್ಮ, ಕೆ.ಎ.ಎಸ್ ಇವರು ಹಾಜರಿದ್ದ ಯುವಕ/ಯುವತಿಯರಿಗೆ ಮನವರಿಕೆ ಮಾಡಿಕೊಟ್ಟರು, ಶ್ರೀ. ಪ್ರಸಾದ್ ಕಾಂಚನ್ ಇದೇ ಸಂಧರ್ಭದಲ್ಲಿ ಮಾತನಾಡಿ ನಮ್ಮ ಯುವ ಜನಾಂಗದವರು ಸಾಮಾಜಿಕ ಸೇವೆಯಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಳ್ಳಬೇಕೆಂದು ಮತ್ತು ಅದರ ಜ್ಯೋತಕವಾಗಿ ಈ ದಿನ ನಡೆಯುವ ರಕ್ತದಾನ ಶಿಬಿರದಲ್ಲಿ ಸ್ವಯಂಪ್ರೇರಿತರಾಗಿ ರಕ್ತದಾನ |

| | |
|---|---|
| | ಮಾಡಬೇಕೆಂದು ಕೋರಿದರು. ಈ ಕರೆಗೆ ಓಗೊಟ್ಟ ಯುವಕ/ಯುವತಿಯರು ಅಭೂತ ಪೂರ್ವ ಉತ್ಸಾಹವನ್ನು ತೋರಿಸಿ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡು ತಮ್ಮ ಸ್ವಯಂಸೇವ ಮನೋಭಾವವನ್ನು ಮೆರೆದರು. ಈ ಸಂಧರ್ಭದಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ರಕ್ತನಿಧಿ ಮೆಡಿಕಲ್ ಆಫೀಸರ್ ಡಾ. ರಚನಾ ಕೊಪ್ಪಲ್ಕರ್, ಶ್ರೀ ರವೀಂದ್ರನಾಥ ಕೆ, ಆಡಳಿತ ಮಂಡಳಿ ಸದಸ್ಯರು, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ದ.ಕ ಜಿಲ್ಲಾ ಶಾಖೆಯ ಕೋ- ಆಡಿನೇಟರ್ ಶ್ರೀ. ಪ್ರವೀಣ್ ಕುಮಾರ್ ಇವರು ಉಪಸ್ಥಿತರಿದ್ದರು. |
| ಜನವರಿ 2020 | ➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ, ಮಂಗಳೂರು ವಿಶ್ವವಿದ್ಯಾಲಯ, ಯುವ ರೆಡ್ ಕ್ರಾಸ್ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಮಾತಾ ಅಮೃತಾನಂದಮಯಿ ಮಠ ಜಂಟಿ ಸಹಭಾಗಿತ್ವದಲ್ಲಿ **"ಯುವ ರಾಷ್ಟ್ರೀಯ ದಿನ"**ದ **ಅಂಗವಾಗಿ ಸ್ವಚ್ಛ ಭಾರತ ಕಾರ್ಯಕ್ರಮವನ್ನು ದಿನಾಂಕ 11.01.2020** ರಂದು ಸರಕಾರಿ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು.<br><br>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ, ಬೆಸೆಂಟ್ **ಯುವ ರೆಡ್ ಘಟಕದ ಯುವ ರೆಡ್ ಕ್ರಾಸ್ ವಾರ್ಷಿಕ ಶಿಬಿರ ಜನವರಿ 11 ರಿಂದ 14** ರವರೆಗೆ ಬೆಸೆಂಟ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಜರಗಿತ್ತು. ಶಿಬಿರದ ಉದ್ಘಾಟನೆಯನ್ನು ಶ್ರೀ. ಸಿಎ. ಶಾಂತರಾಮ್ ಶೆಟ್ಟಿ ಇವರು ನೆರವೇರಿಸಿದರು.<br><br>➢ **ದಿನಾಂಕ 17.01.2020** ರಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ದಕ್ಷಿಣ ಕನ್ನಡ ಜಿಲ್ಲಾ ಘಟಕ, ಮಂಗಳೂರು ವಿಶ್ವವಿದ್ಯಾನಿಲಯ ಯುವ ರೆಡ್‌ಕ್ರಾಸ್ ಘಟಕ ಈ **ವಾಕ್‌ಥಾನ್**ನನ್ನು ಆಯೋಜಿಸಿದ್ದು, ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯ ಚೇರ್‌ಮೆನ್ ಶ್ರೀ ಎಸ್. ನಾಗಣ್ಣ ಚಾಲನೆ ನೀಡಿ ಮಾತನಾಡಿ, ಭಾರತದಲ್ಲಿ ರೆಡ್‌ಕ್ರಾಸ್ ಸಂಸ್ಥೆ ಆರಂಭಗೊಂಡು 100 ವರ್ಷಗಳಾಗಿದ್ದು, ಇದು ದೇಶಾದ್ಯಂತ ಮಾನವೀಯ ಸೇವೆಗಳನ್ನು ಅರ್ಥಪೂರ್ಣವಾಗಿ ಮಾಡುತ್ತಾ ಬರುತ್ತಿದೆ. ರಾಜ್ಯದಲ್ಲಿ ಶತಮಾನೋತ್ಸವದ ಅಂಗವಾಗಿ ನಾನಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು, ಮಂಗಳೂರಿನ ವಾಕ್‌ಥಾನ್ ಮೂಲಕ ಅದಕ್ಕೆ ಚಾಲನೆ ನೀಡಲಾಗಿದೆ. ಇಡೀ ವರ್ಷ ಅರ್ಹರಿಗೆ ವಿವಿಧ ಸೇವಾ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ ಎಂದರು.<br>ಡಾ. ಪಿ. ದಯಾನಂದ ಪೈ-ಪಿ. ಸತೀಶ್ ಪೈ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ. ರಾಜಶೇಖರ್ ಹೆಬ್ಬಾರ್ ಸಿ. ಮಾತನಾಡಿ, ವಿಶ್ವದಾದ್ಯಂತ ರೆಡ್‌ಕ್ರಾಸ್ ಸಂಸ್ಥೆ ಮಾನವೀಯ ಮೌಲ್ಯಗಳೊಂದಿಗೆ ಸೇವೆ ಮಾಡುತ್ತಿದೆ. ನಮ್ಮ ದೇಶದಲ್ಲಿ 100 ವರ್ಷಗಳಿಂದ ಸಂತ್ರಸ್ತರ ಸೇವೆಯಲ್ಲಿ ತೊಡಗಿಸಿಕೊಂಡಿರುವ ಈ ಸಂಸ್ಥೆಯಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಇದರ ಶತಮಾನೋತ್ಸವದ ಕಾರ್ಯಕ್ರಮಕ್ಕೆ ನಮ್ಮ ಸಂಸ್ಥೆಯಲ್ಲಿ ಚಾಲನೆ ನೀಡಿರುವುದು ಅತ್ಯಂತ ಸಂತೋಷವಾಗಿದೆ ಎಂದರು.<br>ರೆಡ್‌ಕ್ರಾಸ್‌ನ ದಕ್ಷಿಣ ಕನ್ನಡ ಘಟಕದ ಚೇರ್‌ಮನ್‌ರವರು ಮಾತನಾಡಿ, ರೆಡ್‌ಕ್ರಾಸ್ ಸಂಸ್ಥೆ ಅರ್ಹ ಸಂತ್ರಸ್ತರಿಗೆ ತುರ್ತು ಅಗತ್ಯಗಳಿಗೆ ಸ್ಪಂದಿಸುತ್ತಾ ಮಾನವೀಯ ಸೇವೆಯನ್ನು ಮಾಡುತ್ತಾ ಬರುತ್ತಿದೆ. ಯುವ ಸಮುದಾಯ ಇದರಲ್ಲಿ ಹೆಚ್ಚು ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.<br><br>➢ **ದಿನಾಂಕ 25.01.2020** ರಂದು ನಿಟ್ಟೆ ಯುವ ರೆಡ್‌ಕ್ರಾಸ್ ವತಿಯಿಂದ **"ರಾಷ್ಟ್ರೀಯ ಮತದಾರರ ದಿನ"** ವನ್ನು ನಿಟ್ಟೆ ಕಾಲೇಜು ಅಡಿಟೋರಿಯಂ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಚೇರ್‌ಮೆನ್ ಶ್ರೀ ಸಿಎ. ಶಾಂತಾರಾಮ ಶೆಟ್ಟಿ ಮತ್ತು ಗೌರವ ಕಾರ್ಯದರ್ಶಿ ಶ್ರೀ. ಪ್ರಭಾಕರ ಶರ್ಮ ಮತ್ತು ಆಡಳಿತ ಮಂಡಳಿ ಸದಸ್ಯರಾದ ಡಾ. ಸತೀಶ್ ಕುಮಾರ್ ಭಂಡಾರಿ ಉಪಸ್ಥಿತರಿದ್ದರು.<br><br>➢ **ದಿ. 31.01.2020** ರಂದು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಮತ್ತು ಯೆನೆಪೋಯ ನರ್ಸಿಂಗ್ ಕಾಲೇಜು, ದೇರಳಕಟ್ಟೆ ಜಂಟಿಯಾಗಿ ಒಡಂಬಡಿಕೆಯನ್ನು ಮಾಡಿಕೊಂಡು (MOU) ಯುವ ರೆಡ್‌ಕ್ರಾಸ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಿದರು. |
| ಫೆಬ್ರವರಿ 2020 | ➢ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಕ್ಷಿಣ ಕನ್ನಡ ಹಾಗೂ ಮಂಗಳೂರು ವಕೀಲರ ಸಂಘ ಇವರ ಸಹಯೋಗದೊಂದಿಗೆ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿ **ದಿನಾಂಕ 06.02.2020 ರಂದು ವಿಶ್ವ ಕ್ಯಾನ್ಸರ್ ದಿನ**ದ ಅಂಗವಾಗಿ ರಕ್ತದಾನ ಶಿಬಿರವನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ವತಿಯಿಂದ ನಡೆಸಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷತೆಯನ್ನು ವಹಿಸಿ ಶಿಬಿರವನ್ನು ಉದ್ಘಾಟಿಸಿ ಶ್ರೀ. ಕಡ್ಲೂರು ಸತ್ಯನಾರಾಯಣ ಆಚಾರ್ಯ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ರಕ್ತದಾನದ ಮಹತ್ವದ ಬಗ್ಗೆ ಮಾತನಾಡಿ ಖುದ್ದಾಗಿ ತಾವೇ ರಕ್ತ ನೀಡುವ ಮೂಲಕ ನ್ಯಾಯಾಧೀಶರಿಗೆ, ನ್ಯಾಯವಾದಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಪ್ರೇರೇಪಿಸಿದರು.<br>ಸಮಾರಂಭದಲ್ಲಿ ಮಾತನಾಡಿದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆಯ ಚೇರ್‌ಮನ್ ಸಿಎ. ಶಾಂತರಾಮ ಶೆಟ್ಟಿಯವರು ಜಿಲ್ಲೆಯಲ್ಲಿ ರೆಡ್‌ಕ್ರಾಸ್ ಸೇವೆಯ ವಿವಿಧ ಕಾರ್ಯಚಟುವಟಿಕೆಗಳನ್ನು ವಿವರಿಸಿ ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ರಕ್ತದಾನ ಶಿಬಿರವನ್ನು ಏರ್ಪಡಿಸಲು ಅವಕಾಶ ಮಾಡಿಕೊಟ್ಟ ಕಾನೂನು ಸೇವಾ ಪ್ರಾಧಿಕಾರ ಹಾಗೂ ಮಂಗಳೂರು ವಕೀಲರ ಸಂಘ ಇವರಿಗೆ ಧನ್ಯವಾದಗಳನ್ನು ತಿಳಿಸಿದರು. |

- ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ, ಯುವ ರೆಡ್‌ಕ್ರಾಸ್, ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು ವತಿಯಿಂದ **ದಿನಾಂಕ 11.02.2020 ರಂದು "ಸಮುದಾಯ ಸಹಾಯ ಕೇಂದ್ರ"**ದ ಉದ್ಘಾಟನೆಯನ್ನು ಸರಕಾರಿ ವೆನ್ಲಾಕ್ ಜಿಲ್ಲಾ ಆಸ್ಪತ್ರೆ, ಒಪಿಡಿ ಬ್ಲಾಕ್, ಮಂಗಳೂರು ಇಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿಯವರು ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿದ್ದ ಮಂಗಳೂರು ವಿವಿ ಉಪಕುಲಪತಿ ಪ್ರೊ. ಪಿ.ಎಸ್. ಯಡಪಡಿತ್ತಾಯ ಅವರು ಸಮುದಾಯ ಸಹಾಯ ಕೇಂದ್ರಗಳ ಮೂಲಕ ಹಿರಿಯ ನಾಗರೀಕರು ಚಟುವಟಿಕೆಯಿಂದಿರಲೂ ಸಹಾಯವಾಗುತ್ತವೆ ಸೇವೆ ಮಾಡಲು ಅವಕಾಶಗಳನ್ನು ಒದಗಿಸುತ್ತದೆ ಎಂದರು.

  ಅಧ್ಯಕ್ಷತೆ ವಹಿಸಿದ್ದ ಶಾಸಕ ವೇದವ್ಯಾಸ ಕಾಮತ್, ಸರಕಾರಿ ಸೇವೆಗಳಲ್ಲಿ ಸಾರ್ವಜನಿಕ ಸಹಭಾಗಿತ್ವವಿದ್ದಾಗ ಹೆಚ್ಚು ಪರಿಣಾಮಕಾರಿ ಜನರಿಗೆ ತಲುಪಲು ಸಾಧ್ಯವಾಗುತ್ತದೆ. ಭಾರತೀಯ ರೆಡ್‌ಕ್ರಾಸ್ ಜಿಲ್ಲಾ ಘಟಕದ ಅಧ್ಯಕ್ಷ ಸಿಎ. ಶಾಂತರಾಮ ಶೆಟ್ಟಿ ಮಾತನಾಡಿ, ಭಾರತದಲ್ಲಿ ರೆಡ್‌ಕ್ರಾಸ್ ಸಂಸ್ಥೆ ಶತಮನೋತ್ಸವ ಸಂಭ್ರಮದಲ್ಲಿದ್ದು ಅನೇಕ ಸೇವಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

- **ದಿನಾಂಕ 15.02.2020** ರಂದು ರಾಜಭವನ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, **ದ.ಕ ಜಿಲ್ಲಾ ಶಾಖೆಗೆ 2018-19ನೇ ಸಾಲಿನ "ಅತ್ಯುತ್ತಮ ಕಾರ್ಯನಿರ್ವಹಣೆಯ ರೆಡ್‌ಕ್ರಾಸ್ ಜಿಲ್ಲೆ" ಪ್ರಶಸ್ತಿ**ಯನ್ನು ಗೌರವಾನ್ವಿತ ರಾಜ್ಯಪಾಲರಾದ ಶ್ರೀ. ವಾಜುಬಾಯ್ ವಾಲಾ ಇವರು ನೀಡಿ ಗೌರವಿಸಿದರು. ಜಿಲ್ಲೆಯ ಪರವಾಗಿ ದ.ಕ ಜಿಲ್ಲಾ ರೆಡ್‌ಕ್ರಾಸ್ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಯಾದ ಶ್ರೀಮತಿ ಸಿಂಧೂ ಬಿ.ರೂಪೇಶ್ ಪ್ರಶಸ್ತಿಯನ್ನು ಸ್ವೀಕರಿಸಿದರು. ಚೇರ್‌ಮೆನ್ ಶ್ರೀ. ಸಿಎ. ಶಾಂತರಾಮ ಶೆಟ್ಟಿ, ಉಪಚೇರ್‌ಮೆನ್ ಶ್ರೀ. ಬಿ. ನಿತ್ಯಾನಂದ ಶೆಟ್ಟಿ ಹಾಗೂ ಗೌರವ ಕಾರ್ಯದರ್ಶಿಯಾದ ಶ್ರೀ. ಎಸ್.ಎ. ಪ್ರಭಾಕರ ಶರ್ಮ ಇವರು ಉಪಸ್ಥಿತರಿದ್ದರು.

- **ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಶತಮನೋತ್ಸವದ ಸಂಭ್ರಮದಲ್ಲಿ**

  ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಹಾಗೂ ಎನ್‌ಎಂಪಿಟಿ ಕ್ಲಿನಿಕ್ ಜಂಟಿ ಆಶ್ರಯದೊಂದಿಗೆ **ದಿನಾಂಕ 20.02.2020**, ಗುರುವಾರದಂದು **ರಕ್ತದಾನ ಮತ್ತು ಉಚಿತ ವೈದ್ಯಕೀಯ ತಪಾಸಣೆ** ಜರಗಿತು. ದ.ಕ. ಜಿಲ್ಲಾ ರೆಡ್‌ಕ್ರಾಸ್‌ನ ಚೇರ್‌ಮನ್ ಸಿಎ. ಶಾಂತರಾಮ ಶೆಟ್ಟಿ ಉದ್ಘಾಟಿಸಿ ರೆಡ್‌ಕ್ರಾಸ್ ಸಂಸ್ಥೆಯು ಅಗತ್ಯದ ಸಂದರ್ಭ ಬಡ ವರ್ಗಕ್ಕೆ ಉಚಿತವಾಗಿ ಸಹಾಯ ಮಾಡುತ್ತಾ ಬಂದಿದೆ. ಪಣಂಬೂರಿನಲ್ಲಿರುವ ಕ್ಲಿನಿಕ್‌ನಲ್ಲಿ ಉಚಿತವಾಗಿ ವೈದ್ಯಕೀಯ ಸೇವೆ ಲಭ್ಯವಿದ್ದು ಸ್ಥಳೀಯರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

  ಸಾಮಾಜಿಕ ಕಾರ್ಯಕರ್ತ ಶ್ರೀ ಬಾಲಕೃಷ್ಣ ಕೆಂಚನಕೆರೆ ಮಾತನಾಡಿ, ಈ ಕ್ಲಿನಿಕ್ ಆರಂಭವಾಗಿ ಒಂದು ವರ್ಷವಾದರೂ ಸ್ಥಳೀಯರ ಭಾಗವಹಿಸುವಿಕೆ ಕಡಿಮೆಯಿದೆ. ಸಾವಿರಾರು ರೂಪಾಯಿ ಔಷಧಕ್ಕೆ ಖಾಸಗಿ ಕ್ಲಿನಿಕ್‌ಗಳಲ್ಲಿ ಖರ್ಚು ಮಾಡುವ ಬದಲು ಇಲ್ಲಿ ಉಚಿತವಾಗಿ ಪಡೆಯಬಹುದು. ರೆಡ್‌ಕ್ರಾಸ್ ಸೇವೆಯ ಸದ್ಬಳಕೆಯಾಗಬೇಕಿದೆ ಎಂದರು. ಆಡಳಿತ ಮಂಡಳಿತ ಸದಸ್ಯರಾದ ಶ್ರೀ ಯತೀಶ್ ಬೈಕಂಪಾಡಿ, ಶ್ರೀ ನಿತ್ಯಾನಂದ ಶೆಟ್ಟಿ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

- **ದಿನಾಂಕ 6, 7, ಮತ್ತು 8 ನೇ ಫೆಬ್ರವರಿ 2020** ರಂದು ಮಂಗಳೂರು ವಿಶ್ವವಿದ್ಯಾನಿಲಯ 150 ನೇ ವರ್ಷದ ಸಂಭ್ರಮಾಚರಣೆಯ ಸಲುವಾಗಿ ರೆಡ್‌ಕ್ರಾಸ್‌ನ ಮಾನವೀಯ ಮೌಲ್ಯದ ವಿಚಾರ ದಾರೆಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಸಲುವಾಗಿ **ಶುದ್ಧ ಕುಡಿಯು ನೀರಿನ ವ್ಯವಸ್ಥೆ ಮತ್ತು ಪ್ರಥಮ ಚಿಕಿತ್ಸೆ ಪ್ರಚಾರ ಕಾರ್ಯಕ್ರಮ**ನ್ನು ಏರ್ಪಡಿಲಾಗಿತ್ತು.

- ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ ಮತ್ತು ಮಂಗಳೂರು ವತಿಯಿಂದ ದಿನಾಂಕ **29.02.2020 ರಿಂದ 04.03.2020** ರವರೆಗೆ 05 ದಿನಗಳ **ಯುವ ರೆಡ್‌ಕ್ರಾಸ್ ಪುನಶ್ಚೇತನ ಮತ್ತು ನಾಯಕತ್ವ ಶಿಬಿರ**ವನ್ನು ದಿನಾಂಕ 29.02.2020 ರಂದು ಡಾ. ಶಿವರಾಮ ಕಾರಂತ ಪಿಲಿಕುಲ ನಿಸರ್ಗಧಾಮ, ವಾಮಂಜೂರು, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಪ್ರಾಸ್ತವಿಕ ಮತ್ತು ಸ್ವಾಗತ ಭಾಷಣವನ್ನು ಶ್ರೀ. ಸಚೇತ್ ಸುವರ್ಣ, ಜಿಲ್ಲಾ ಯುವ ರೆಡ್‌ಕ್ರಾಸ್ ಕೋ-ಆಡಿನೇಟರ್, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಇವರು ನಿರ್ವಹಿಸಿದರು. ಅಧ್ಯಕ್ಷತೆಯನ್ನು ರೆಡ್‌ಕ್ರಾಸ್ ಸಂಸ್ಥೆಯ ಚೇರ್‌ಮೆನ್ ಶ್ರೀ. ಸಿಎ. ಶಾಂತರಾಮ ಶೆಟ್ಟಿ ವಹಿಸಿಕೊಂಡಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಮೇಘನಾ ಆರ್ ಕೆ.ಎ.ಎಸ್., ಕಾರ್ಯನಿರ್ವಾಹಕ ನಿರ್ದೇಶಕರು, ಡಾ. ಶಿವರಾಮ ಕಾರಂತ ಪಿಲಿಕುಲ ನಿಸರ್ಗಧಾಮ ಇವರು ಜ್ಯೋತಿ ಬೆಳಗುವುದರೊಂದಿಗೆ ಉದ್ಘಾಟಿಸಿ, ಉದ್ಘಾಟನಾ ಭಾಷಣ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಐರಿನ್ ಆರತಿ, Humanitarian Professional ICRC, IFRC, IRCS & WHO, ಡಾ. ಕೆ.ವಿ ರಾವ್, ನಿರ್ದೇಶಕರು, ಪ್ರಾದೇಶಿಕ ವಿಜ್ಞಾನ ಕೇಂದ್ರ, ಡಾ. ಶಿವರಾಮ ಕಾರಂತ ಪಿಲಿಕುಲ ನಿಸರ್ಗಧಾಮ, ಶ್ರೀ. ಎಸ್.ಎ ಪ್ರಭಾಕರ ಶರ್ಮ.,ಕೆ.ಎ.ಎಸ್(ನಿ) ಗೌ. ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಶ್ರೀ. ಆರ್ಚಿಬಾಲ್ಡ್ ಹೆರ್ಮನ್ ಜಾರ್ಜ್ ಮೆನೇಜಸ್ ಗೌ. ಖಚಾಂಚಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಮತ್ತು ಶ್ರೀ. ಆಶೋಕ್ ಕುಮಾರ್ ಶೆಟ್ಟಿ, ಮಾಜಿ ಪ್ರಧಾನ ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

<table>
<tr><td></td><td>ಸಮಾರೋಪ ಸಮಾರಂಭ<br>ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ ಮತ್ತು ಮಂಗಳೂರು ವತಿಯಿಂದ ದಿನಾಂಕ 29.02.2020 ರಿಂದ 04.03.2020 ರವರೆಗೆ 05 ದಿನಗಳ ಜಿಲ್ಲಾ ಮಟ್ಟದ ಯುವ ರೆಡ್‌ಕ್ರಾಸ್ ಪುನಶ್ಚೇತನ ಮತ್ತು ನಾಯಕತ್ವ ಶಿಬಿರವನ್ನು ಡಾ. ಶಿವರಾಮ ಕಾರಂತ ಪಿಲಿಕುಲ ನಿಸರ್ಗಧಾಮದಲ್ಲಿ ಆಯೋಜಿಸಲಾಗಿದ್ದು, ಕಾರ್ಯಕ್ರಮದ ಸಮಾರೋಪ ಸಮಾರಂಭವು ದಿನಾಂಕ 04.03.2020 ರಂದು ಪಿಲಿಕುಳ ವಿಜ್ಞಾನ ಕೇಂದ್ರದಲ್ಲಿ ಏರ್ಪಡಿಸಲಾಗಿತ್ತು.<br>ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ. ಸಿ.ಎ. ಶಾಂತರಾಮ ಶೆಟ್ಟಿ, ಚೇರ್‌ಮೆನ್, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ ಇವರು ವಹಿಸಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ "ಶತಮಾನೋತ್ಸವ ಸಂಭ್ರಮದ ಆಚರಣೆಯ ಈ ವರ್ಷದಲ್ಲಿ ರಾಷ್ಟ್ರಮಟ್ಟದ ಯುವ ರೆಡ್‌ಕ್ರಾಸ್ ಶಿಬಿರ ನಡೆಸಲು ತೀರ್ಮಾನಿಸಲಾಗಿದೆಂದು ತಿಳಿಸಿದರು.</td></tr>
<tr><td>ಮಾರ್ಚ್ 2020</td><td>➢ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲಾ ಶಾಖೆ, ಮಂಗಳೂರು ಮತ್ತು ವಾಣಿಜ್ಯ ತೆರಿಗೆ ಇಲಾಖೆ ಆಶ್ರಯದಲ್ಲಿ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ"ಯನ್ನು ದಿನಾಂಕ 08.03.2020 ರಂದು ವಾಣಿಜ್ಯ ತೆರಿಗೆ ಇಲಾಖೆ ಸಂಕೀರ್ಣ, ಮಂಗಳೂರು ಇಲ್ಲಿ ಏರ್ಪಡಿಸಲಾಗಿತ್ತು. ಅಧ್ಯಕ್ಷತೆಯನ್ನು ಶ್ರೀಮತಿ ಮೀರಾ ಪಂಡಿತ್, ಜಂಟಿ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ (Admin) ವಹಿಸಿದ್ದರು. ಮುಖ್ಯ ಅತಿಥಿಯಾಗಿ ಶ್ರೀ. ಅಕ್ಷತ ಕುಪ್ಪಗಲ್, ವಾಣಿಜ್ಯ ತೆರಿಗೆ ಅಧಿಕಾರಿ, ಬಂಟ್ವಾಳ ವಲಯ, ಶ್ರೀಮತಿ ಸುಲೋಚನ, ಜಂಟಿ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ (ಅಪೀಲು) ವಹಿಸಿಕೊಂಡಿದ್ದರು.<br><br>➢ <u>ಕೋವಿಡ್–19 :</u><br>ದಿ. 24.03.2020ರಿಂದ ಕೊರೊನಾ ಸೋಂಕಿನಿಂದಾಗಿ ಲಾಕ್‌ಡೌನ್ ಜಾರಿಗೆ ಬಂದಿದ್ದು, ಈ ಸಂದರ್ಭದಲ್ಲಿ ಜಿಲ್ಲಾ ಕಮಾಂಡ್ ಹಾಗೂ ಕಂಟ್ರೋಲ್ ರೂಮ್ ನಿರ್ವಹಣೆಯನ್ನು ಜಿಲ್ಲಾಡಳಿತದ ಸೂಚನೆಯಂತೆ 24X7 ನಮ್ಮ ರೆಡ್‌ಕ್ರಾಸ್ 25 ಸ್ವಯಂಸೇವಕರು ಕಾರ್ಯನಿರ್ವಹಿಸಿದರು. ಶ್ರೀ ಯತೀಶ್ ಬೈಕಂಪಾಡಿ, ಸದಸ್ಯರು, ರಾಜ್ಯ ಶಾಖೆ ಮತ್ತು ಪ್ರಕೃತಿ ವಕೋಪ ನಿರ್ವಹಣಾ ಉಪಸಮಿತಿ ಚೇರ್‌ಮನ್ ಇವರು ಸ್ವಯಂಸೇವಕರಿಗೆ ಮಾರ್ಗದರ್ಶನ ಮಾಡಿದರು.<br><br>➢ <u>ಕ್ವಾರಂಟೈನ್ :</u><br>ಜಿಲ್ಲಾಡಳಿತದಿಂದ N.I.T.K ಸುರತ್ಕಲ್ ಇಲ್ಲಿ ಸ್ಥಾಪಿಸಲಾದ ಕ್ವಾರಂಟೈನ್ ಸೌಕರ್ಯ ಕೇಂದ್ರಕ್ಕೆ ರೆಡ್‌ಕ್ರಾಸ್ ವತಿಯಿಂದ ಹಾಸಿಗೆ (150) ಪಿ.ಪಿ ಕಿಟ್ಸ್ (5) ಹಾಗೂ ಲಿನನ್ ಬೆಡ್‌ಶೀಟ್ (150) ಗಳನ್ನು ನೀಡಲಾಯಿತು.</td></tr>
</table>

**ಪ್ರಥಮ ಚಿಕಿತ್ಸೆ ಅರಿವು ಮತ್ತು ತರಬೇತಿಗಳ ವಿವರಗಳು ಈ ಕೆಳಕಂಡಂತಿವೆ:**

| ದಿನಾಂಕ | ಕಂಪೆನಿ/ಸಂಸ್ಥೆ | ಶಿಬಿರಾರ್ಥಿಗಳ ಸಂಖ್ಯೆ |
|---|---|---|
| 05.07.2019 | ಆಟೋ ಚಾಲಕರು, ಸುಳ್ಯ (ಕಾರ್ಮಿಕ ಇಲಾಖೆ) | 45 |
| 17.07.2019 | ಭಾರತ್ ಆಗ್ರೋವೆಟ್ ಇಂಡಸ್ಟ್ರೀಸ್, ಮಂಗಳೂರು | 25 |
| 30.07.2019 | ಹಿಂದುಸ್ತಾನ್ ಪೆಟ್ರೋಲಿಯಂ ಕೋರ್ಪರೇಶನ್ ಲಿಮಿಟೆಡ್ (MHMSLPL) ಬಾಳ, ಮಂಗಳೂರು | 27 |
| 22.08.2019 | ಹಿಂದುಸ್ತಾನ್ ಪೆಟ್ರೋಲಿಯಂ ಕೋರ್ಪರೇಶನ್ ಲಿಮಿಟೆಡ್ (MHMSLPL) ಬಾಳ, ಮಂಗಳೂರು | 18 |
| 29.08.2019 | ನಂದಿನಿ ಸಭಾಗ್ರಹ, ಮಿನಿ ವಿಧಾನ ಸೌಧ, ಹಂಪನಕಟ್ಟೆ, ಮಂಗಳೂರು (ಕಾರ್ಮಿಕ ಇಲಾಖೆ) | 40 |
| 24.10.2019 | ಒ.ಎನ್.ಜಿ.ಸಿ ಮಂಗಳೂರು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ | 35 |
| 09.11.2019 | ಸಿಂಜಿನ್ ಇಂಟರ್‌ನ್ಯಾಶನಲ್ ಲಿಮಿಟೆಡ್, ಮಂಗಳೂರು | 25 |
| 16.11.2019 | ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪರೇಶನ್ ಲಿಮಿಟೆಡ್, ಮಂಗಳೂರು (ಎಲ್‌ಪಿಜಿ ಇಂಪೋರ್ಟ್ ಫೆಸಿಲಿಟಿ) | 35 |
| 16.12.2019 | ಸಿಂಜಿನ್ ಇಂಟರ್‌ನ್ಯಾಶನಲ್ ಲಿಮಿಟೆಡ್, ಮಂಗಳೂರು | 26 |
| 30.12.2019 | ಗಾಡ್ರೆ ಮರ್ರೈನ್ ಎಕ್ಸ್‌ಪೋರ್ಟ್ ಪ್ರೈವೆಟ್ ಲಿಮಿಟೆಡ್, ಮಂಗಳೂರು | 30 |
| 31.12.2019 | ಇಂಡಿಯನ್ ಸ್ಟ್ರಾಟಜಿಕ್ ಪೆಟ್ರೋಲಿಯಂ ರಿಸರ್ವ್ಸ್ ಲಿಮಿಟೆಡ್(ISPRL), ಮಂಗಳೂರು | 30 |

**ರೆಡ್‌ಕ್ರಾಸ್ ಸಭೆಗಳು:**

| ಕ್ರ.ಸಂ. | ಸಭೆಗಳ ಹೆಸರು | ಒಟ್ಟು ಸಭೆಗಳು |
|---|---|---|
| 1 | ಸರ್ವಸದಸ್ಯರ ವಾರ್ಷಿಕ ಮಹಾಸಭೆ | 01 |
| 2 | ಆಡಳಿತ ಮಂಡಳಿ ಸಭೆಗಳು | 05 |
| 3 | ರಕ್ತನಿಧಿ ಉಪಸಮಿತಿ ಸಭೆಗಳು | 02 |
| 4 | ನೇಮಕಾತಿ ಉಪಸಮಿತಿ ಸಭೆಗಳು | 02 |
| 5 | ಹಣಕಾಸು ಉಪಸಮಿತಿ ಸಭೆಗಳು | 04 |
| 6 | ಯುವ ರೆಡ್‌ಕ್ರಾಸ್ ಉಪಸಮಿತಿ ಸಭೆ | 01 |
| 7 | ವಿಶೇಷ ಚೇತನ ಉಪಸಮಿತಿ ಸಭೆ | 01 |
| 8 | ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರ ಉಪಸಮಿತಿ ಸಭೆ | 01 |

**ಹಿನ್ನುಡಿ :**

ರೆಡ್‌ಕ್ರಾಸ್ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ವರದಿಯ ಅವಧಿಯಲ್ಲಿ ನೀಡಿದ ಸಲಹೆ, ಸಹಕಾರಕ್ಕೆ ನನ್ನ ವಂದನೆಗಳು. ಸಭಾಪತಿಯಾದ ಶ್ರೀ ಸಿಎ. ಶಾಂತರಾಮ ಶೆಟ್ಟಿ ಹಾಗೂ ಎಲ್ಲಾ ಆಡಳಿತ ಮಂಡಳಿಯ ಸದಸ್ಯರಿಗೆ ಅವರು ನೀಡಿದ ಸಹಕಾರಕ್ಕೆ ನನ್ನ ಧನ್ಯವಾದಗಳು.

ನಮ್ಮ ರಕ್ತನಿಧಿಯ ವೈದ್ಯರು ಹಾಗೂ ಸಿಬ್ಬಂದಿ ವರ್ಗದವರು 133 ರಕ್ತದಾನ ಶಿಬಿರಗಳನ್ನು ಏರ್ಪಡಿಸಿದ್ದು ಇದಕ್ಕೆ ಸಹಕರಿಸಿದ ಎಲ್ಲಾ ಸಂಘಟನೆಗಳು ಹಾಗೂ ಎಲ್ಲಾ ಸಂಸ್ಥೆಗಳಿಗೆ ನಾನು ಚಿರಋಣಿ.

ಕರ್ನಾಟಕ ರಾಜ್ಯ ಶಾಖೆಯ ಸಭಾಪತಿಯವರಾದ ಶ್ರೀ ಎಸ್. ನಾಗಣ್ಣ, ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಶಾಖೆಯ ಎಲ್ಲಾ ಆಡಳಿತ ಮಂಡಳಿಯ ಸದಸ್ಯರಿಗೆ ಅವರ ಮಾರ್ಗದರ್ಶನ ಹಾಗೂ ಬೆಂಬಲಕ್ಕೆ ನಾನು ಅಭಾರಿಯಾಗಿದ್ದೇನೆ. ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ ಜಿಲ್ಲೆಯ ಪರವಾಗಿ ನಾನು ಎಲ್ಲಾ ಸದಸ್ಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾವೆಲ್ಲರೂ ಸೇರಿ ಬಲಿಷ್ಠ ಸಮಾಜವನ್ನು ರೆಡ್‌ಕ್ರಾಸ್ ತತ್ವಗಳ ಆಧಾರದಲ್ಲಿ ರೂಪಿಸಲು ಶ್ರಮಿಸೋಣ.

ಆಡಳಿತ ಮಂಡಳಿಯ ಪರವಾಗಿ,

ಎಸ್.ಎ. ಪ್ರಭಾಕರ ಶರ್ಮ
**ಗೌ.ಕಾರ್ಯದರ್ಶಿ**
ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ದ.ಕ. ಜಿಲ್ಲಾ ಶಾಖೆ

ದಿನಾಂಕ: 04.01.2021